ಶ್ರೀ ಜಿ. ನಾರಾಯಣಗೌಡ.—ಬೇಗ ಆರೋಗ್ಯ ಕೇಂದ್ರಗಳನ್ನು ಏರ್ಪಾಡು ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಯೋಚನೆ ಮಾಡುತ್ತೇವೆ.

Sri H. C. LINGA REDDY.—May I know whether the comprehensive scheme is intended for starting these health units in the border areas also ?

Sri T. CHANNIAH.—The comprehensive scheme is not meant for starting of health units in border areas but it is meant to convert all the Local Fund Dispensaries into Health Units to undertake the work of D.D.T. spraying and all other works relating to Public Health Department. That scheme costs about Rs. 22, lakhs to the Government.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಈ ವರ್ಷ ಮಳೆಬಾಗಿಲು ತಾಲ್ಲೂಕಿನಲ್ಲಿ ಹ್ಲೇಗು ಬಂದಿರಲಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಬಂದಿತ್ತು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಎಷ್ಟು ಜನರಿಗೆ ಹ್ಲೇಗು ತಗುಲಿತ್ತು, ಎಷ್ಟು ಜನರು ನತ್ತರೆಂಬುದನ್ನು ಹೇಳುತ್ತೀರಾ ?

ಅಧ್ಯಕ್ಷರು.—ಹೇಗೆ ಹೇಳುವುದು ? ಈಗ ಅದನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಐವತ್ತು ಜನರು ನತ್ತಿದ್ದಾರೆಂದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ ಚನ್ನಯ್ಯ.—ನಲವತ್ತು ಜನರ ಮೇಲೆ ಎಂದು ಹೇಳಬಹುದು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ತಮ್ಮ ಅಭಿಪ್ರಾಯದಲ್ಲಿ ದುಡ್ಡು ಪ್ರಾಮುಖ್ಯವೇ ಹೊರತು ಅವರ ಪ್ರಾಣಗಳು ಮುಖ್ಯವಲ್ಲ ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ರೀತಿಯೇನಿಲ್ಲ.

ಶ್ರೀ ವಿ. ಆರ್. ನಾಯ್ಡು.—ಹ್ಲೇಗು ಉಪದ್ರವವನ್ನು ತಡೆಗಟ್ಟುವುದಕ್ಕೆ 23 ಲಕ್ಷ ರೂಪಾಯಿಗಳು ಖರ್ಚಾಗುತ್ತವೆಂದು ಹೇಳಿದಿರಿ. ನಮ್ಮ ಪೂರ್ವಿಕರು ದುಡ್ಡು ಖರ್ಚು ಮಾಡದೆಯೇ, ಮಾರಮ್ಮ, ಕಾಳಮ್ಮ ಮುಂತಾದ ದೇವಿಗೆ ಪೂಜೆ ಮಾಡಿದರೆ ಹ್ಲೇಗು ಮುಂತಾದುವು ನಿಂತುಹೋಗುತ್ತವೆಂದು ಹೇಳಿ ಮಾಡುತ್ತಿರಲಿಲ್ಲವೆ ?

(*No answer*)

Road from Haradanahalli to Terakanambi *via* Arakalvadi.

Q.—779. Sri U. M. MADAPPA (Chamarajanagar).—

Will the Government be pleased to state :—

(*a*) whether grant was allotted for A.R. and S.R. of Haradanahalli to Terakanambi road *via* Arakalavadi in Chamarajanagar Taluk either by Mysore District Board or P.W.D. for the year 1954-55 ;

(*b*) if so, the amount allotted and spent so far ;

(*c*) if no grant was allotted, the reason for the same ;

(*d*) the next remedy they would consider ?

A.—Sri T. CHANNIAH (Minister for Public Health and Local Self-Government).—

(*a*) Yes. (Both by the P. W. D. and also the District Board, Mysore)

(*b*) By the P. W. D. A.R. S.R. 1954-55 ... Rs. 2,400 1,600

By the District Board, Mysore. Rs. 3,200 ...

(*c*) and (*d*) do not arise in view of reply to clause (*b*).

ಶ್ರೀ ಯು. ಎಂ. ಮಾದಪ್ಪ.—ಬಿ/ಗೆ ಉತ್ತರವಾಗಿ ಕೊಟ್ಟಿರತಕ್ಕ ಮೊಬಲಗು ಖರ್ಚಾಗಿದೆಯೇ ?

ಶ್ರೀ ಟಿ. ಚನ್ನಯ್ಯ.—ಆ ಮೊಬಲಗು 1954-55ರಲ್ಲಿ allot ಆಗಿರುವುದು. ಅದು ಖರ್ಚಾಗಿದೆಯೇ ಇಲ್ಲವೇ ಎಂಬುದನ್ನು ಹೇಳಲು ನೋಟೀಸ್ ಬೇಕು.

ಶ್ರೀ ಯು. ಎಂ. ಮಾದಪ್ಪ.—ನನ್ನ ಪ್ರಶ್ನೆ ಸ್ಪಷ್ಟವಾಗಿದೆ. ಈ ತಹಲ್‌ವರೆಗೂ ಒದಗಿಸಿದ್ದ ಹಣದಲ್ಲಿ ಖರ್ಚು ಮಾಡಿದ ಮೊಬಲಗೆಷ್ಟು ಎಂದು ಕೇಳಿದ್ದೇನೆ.

ಶ್ರೀ ಟಿ. ಚನ್ನಯ್ಯ.—ಒದಗಿಸಿದ್ದ ಮೊಬಲಗನ್ನು ಕೇಳಿದ್ದೀರಿ, ಅದನ್ನು ಕೊಟ್ಟಿದೆ. To say whether the amount is spent or not, I want notice.

ಶ್ರೀ ಯು. ಎಂ. ಮಾದಪ್ಪ.—ಒದಗಿಸಿದ್ದ ಮತ್ತು ಖರ್ಚು ಮಾಡಿರುವ ಹಣವೆಷ್ಟು ಎಂದು ಕೇಳಿದ್ದೇನೆ.

Sri T. CHANNIAH.—Perhaps the amount has been spent. I am not aware of it, Sir.

ಶ್ರೀ ಯು. ಎಂ. ಮಾದಪ್ಪ.—ಹಾಗಾದರೆ, ಈ ವಿಷಯದಲ್ಲಿ ಜಾಗ್ರತೆ ಕಾರ್ಯಕ್ರಮ ತೆಗೆದುಗೊಳ್ಳುತ್ತೀರಾ ?

Sri T. CHANNIAH.—It will be done.

ಶ್ರೀ ಯು. ಎಂ. ಮಾದಪ್ಪ.—ಈ ಪ್ರಶ್ನೆಗೆ ಉತ್ತರದ ಒಂದು ಭಾಗ ತಮಗೆ ಸೇರಿದ್ದು ; ಇನ್ನೊಂದು P.W.Dಗೆ ಸೇರಿದ್ದು. ಅವರೇನು ಹೇಳುತ್ತಾರೆ ಇದಕ್ಕೆ ಉತ್ತರವಾಗಿ.

Mr. SPEAKER.—If that information is not supplied, you can get that information.

Cross Barrett Cottages in the Corporation Area.

Q.—809. Sri SYDNEY A. THOMAS (Nominated).—

Will the Government be pleased to state :—

(*a*) whether the Cross Barrett Cottages in the Corporation Area were